ಆಗಿದೆ. ಆದರೆ ವಿವರಗಳನ್ನು ತಿಳಿಸುವುದಕ್ಕಾಗುವುದಿಲ್ಲ.

ಶ್ರೀ ಕೆ. ಲಕ್ಕಪ್ಪ.—ಆ ಅಗ್ರೀಮೆಂಟ್ ಪ್ರಕಾರ ಒಂದು ಅವಧಿಯೊಳಗೇನಾದರೂ ಆ ನದಿಗೆ ಅಡ್ಡಗಟ್ಟುಬಹುದೆಂದು ಒಂದು ನಿಯಮ ವಿದೆ ಅಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಕೆ. ಲಕ್ಕಪ್ಪ.—ಆ ನಿಯಮದ ಪ್ರಕಾರ ಜರೂರಾಗಿ ಅಣೆಕಟ್ಟು ಕಟ್ಟಿದರೆ ಸೂಕ್ತವಲ್ಲವೆ?

Mr. SPEAKER.—That question does not arise.

ಶ್ರೀ ಕೆ. ಲಕ್ಕಪ್ಪ.—ಅಣೆಕಟ್ಟಿಗಾಗಿ 1·9 ಕೋಟಿ ರೂಪಾಯಿಗಳ Estimate ಆಗಿದೆ ಎಂದು ಹೇಳುತ್ತೀರಿ. ಅದು ಸ್ಯಾಂಕ್ಷನ್ ಆಗಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಸ್ಯಾಂಕ್ಷನ್ ಆಗಿಲ್ಲ. ಈಗಿನ ದರದಲ್ಲಿ ಅದಕ್ಕೆ ಸುಮಾರು 7 ಕೋಟಿ ರೂಪಾಯಿಗಳಾಗಬಹುದು.

ಶ್ರೀ ಕೆ. ಲಕ್ಕಪ್ಪ.—ಕೆಲಸ ತೆಗೆದುಕೊಳ್ಳುವುದರಲ್ಲಿ ಏನಾದರೂ ಅಡಚಣೆಗಳು ಇವೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಅಡಚಣೆ ಅಂದರೆ, ದುಡ್ಡೇ ಮುಖ್ಯವಾದ ಅಡಚಣೆ. ಇನ್ನೂ ಕೆಲವು ಅಡಚಣೆಗಳು ಇವೆ.

ಶ್ರೀ ಕೆ. ಲಕ್ಕಪ್ಪ.—ಈ ದುಡ್ಡಿಗಾಗಿ ಸೆಂಟ್ರಲ್ ಗೌರ್ನ್‌ಮೆಂಟ್ ಅವರನ್ನು ಏನಾದರೂ ಕೇಳುವುದಕ್ಕೆ ಪ್ರಯತ್ನ ಮಾಡಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಲಕ್ಕವಳ್ಳಿಗೆ ಸೆಂಟ್ರಲ್ ಗೌರ್ನ್‌ಮೆಂಟಿನವರ ಸಹಾಯ ದೊರೆತಿಲ್ಲ. ಆದ್ದರಿಂದ ಸದ್ಯದಲ್ಲಿ ಈ ವಿಚಾರಕ್ಕೆ ಕೈಹಾಕುವುದು ಸೂಕ್ತವೇ ಎಂಬುದನ್ನು ಯೋಚನೆ ಮಾಡಬೇಕು.

ಶ್ರೀ ಕೆ. ವಿ. ಶಂಕರ ಗೌಡ (ಮಂಡ್ಯ).—ಈ ಅಣೆಕಟ್ಟು ಕಟ್ಟುವುದರಿಂದ ನಾಗಮಂಗಲದ ತಾಲ್ಲೂಕಿಗೆ ಏನಾದರೂ ನೀರು ಬರುವ ಸಂಭವವಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ; ಇಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—9,000 ಎಕರೆ ಜಮೀನು ಮುಳುಗಡೆ ಆಗುತ್ತೆಂದು ಹೇಳಿದಿರಿ. ಈ ಜಮೀನಿನಲ್ಲಿ ಬಹು ಭಾಗ ತರಿ ಜಮೀನಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಜಿ. ಎ. ತಿಮ್ಮಪ್ಪಗೌಡ.—31 ಹಳ್ಳಿಗಳು ಮುಳುಗಡೆ ಆಗುತ್ತೆಂದು ಹೇಳಿದ್ದೀರಿ. ಇದಲ್ಲದೆ ಹೇಮಾವತಿ ಮತ್ತು ಯಗಚಿ ನದಿಗಳ ನೀರು ಅಲ್ಲಿಗೆ ಬರುವುದರಿಂದ ಇನ್ನೂ ಅನೇಕ ಗ್ರಾಮಗಳು ವರ್ಗಾಂತರವಾಗಬೇಕಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಇರಬಹುದು.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಇದರಿಂದ 9,000 ಎಕರೆಗಳಲ್ಲದೆ ಇನ್ನೂ 10,000 ಎಕರೆ ಗಳಷ್ಟು ಮುಳುಗಡೆಯಾಗುವುದಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಇರಬಹುದು.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಸರ್ಕಾರದವರು ಇನ್ನೊಂದು ಸಾರಿ ಈ ವಿಚಾರದಲ್ಲಿ ಲಾಭ ನಷ್ಟದ ಯೋಚನೆಮಾಡಿ ಆ ಮೇಲೆ ತೀರ್ಮಾನ ಮಾಡುವುದು?

ಶ್ರೀ ಕಡಿದಾಳ್ ಮಂಜಪ್ಪ.—ಕೂಲಂಕಷವಾಗಿ ಪರಿಶೀಲನೆ ಮಾಡಿಯೇ ಮಾಡುತ್ತೇವೆ.

Construction of Bridges across Mattihalla, Rangolehalla at Anavari and the stream at Siddlipura, Bhadravathi Taluk.

Q.—65. Sri B. MADHAVACHAR (Bhadravathi).—

Will the Government be pleased to state :—

(*a*) whether estimates for construction of bridges across Mattihalla, Rangolehalla at Anavari and across the stream at Siddlipura, Bhadravathi Taluk, have been prepared ;

(*b*) when the work could be expected to be taken up ?

A.—Sri Kadidal MANJAPPA (Minister for Revenue and Public Works).—

(*a*) Estimate for construction of a bridge across Mattihalla is got up for Rs. 27,000 ; estimates for a bridge across Rangolehalla and a bridge across the stream at Siddlipura are being got up.

(SRI B. MADHAVACHAR.)

(*b*) The works will be taken up after the estimates are sanctioned.

ಶ್ರೀ ಬಿ. ಮಾಧವಾಚಾರ್.—ಮತ್ತೀಹಳ್ಳದ ಸೇತುವೆಯನ್ನು ಕಟ್ಟಲು ಅಂದಾಜು ತಯಾರಾಗಿ ಎಷ್ಟು ದಿವಸವಾಯ್ತು ?

Sri Kadidal MANJAPPA.—Notice.

ಶ್ರೀ ಬಿ. ಮಾಧವಾಚಾರ್.—ಕಂಬರ್ ಗಟ್ಟ-ಮೂಡಲಗೆರೆ ರೋಡಿನ ಯೋಜನೆಯಲ್ಲಿ ಅದಕ್ಕೆ ಹಣ ಒದಗಿಸಲಾಗಿದೆಯೇ ಏಂಬುದನ್ನು ತಿಳಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್ ಬೇಕು.

Mr. SPEAKER.—I would like the Hon'ble Member to read the answer which is in his favour. They are going to take up the work.

Kagehalla Project in Bhadravathi Taluk.

Q.—66. Sri B. MADHAVACHAR (Bhadravathi).—

Will the Government be pleased to state :—

(*a*) whether they are aware that considerable amount has been spent on Kagehalla Project in Bhadravathi Taluk and is left unfinished :

(*b*) whether they will revise their earlier decision and take up the work now ?

A.—Sri Kadidal MANJAPPA (Minister for Revenue and Public Works).—

(*a*) Yes.

(*b*) (1) The construction of the Kagehalla anicut has been dropped as the right bank channel from the Bhadra Reservoir crosses the Kagehalla valley and would be very close and parallel to the Kagehalla channel.

(2) The channel excavated in connection with this project is made to function as a feeder channel to the Hirekere tank.

ಶ್ರೀ ಬಿ. ಮಾಧವಾಚಾರ್.—ಕಾಗೇಹಳ್ಳದ ಯೋಜನೆಗೆ ಇದುವರೆಗೆ ಎಷ್ಟು ಹಣ ಖರ್ಚಾಗಿದೆ ?

ಶ್ರೀ ಕಡಿದಾಳ್ ಮಂಜಪ್ಪ.—4,99,542 ರೂಪಾಯಿಗಳು.

ಶ್ರೀ ಬಿ. ಮಾಧವಾಚಾರ್.—ಇದರಿಂದ ಎಷ್ಟು ಎಕರೆ ಪ್ರದೇಶಕ್ಕೆ ನೀರು ಬರಬಹುದೆಂದು ಅಂದಾಜಾಗಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ಇದರಿಂದ direct Irrigation ಇಲ್ಲ. ಸುಮಾರು 15 ಕೆರೆಗಳಿಗೆ feed ಮಾಡಬಹುದೆಂಬ ನಿರೀಕ್ಷೆಯಿದೆ.

ಶ್ರೀ ಬಿ. ಮಾಧವಾಚಾರ್.—ಇನ್ನೂ ಎಷ್ಟು ಹಣ ಖರ್ಚುಮಾಡಿದರೆ ಕೆಲಸ ಪೂರೈಸುತ್ತದೆ ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಹೇಳುವುದಕ್ಕಾಗುವುದಿಲ್ಲ ; ಈಗ ಕೆಲಸ ನಿಲ್ಲಿಸಿದೆ.

ಶ್ರೀ ಬಿ. ಮಾಧವಾಚಾರ್.—ಇದನ್ನು Re-examine ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಆಗಬಹುದು.

Relief works in drought affected taluks of Shimoga District.

Q.—188. Sri H. S. RUDRAPPA (Honnali).—

Will the Government be pleased to state :—

(*a*) how many taluks in Shimoga District have been affected by drought ;

(*b*) the amount spent so far for relief works in these taluks ?

A.—Sri Kadidal MANJAPPA (Minister for Revenue and Public Works).—

(*a*) Two taluks—Channagiri and Honnali.

(*b*) Relief works have been undertaken in those taluks through the Public Works, Revenue, Village Panchayet agencies and out of Grow More Food funds. The amounts spent are given below :—